# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 01. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 992(1125) |
| 02. | ಮಾನ್ಯ ವಿಧಾನ ಪರಿಷತ್ ಸದಸ್ಯರ ಹೆಸರು | : ಶ್ರೀ ಮುನಿರಾಜು ಗೌಡ.ಪಿ.ಎಂ. (ವಿಧಾನ ಸಭೆಯಿಂದ ಚುನಾಯಿತರಾದವರು) |
| 03. | ಉತ್ತರಿಸುವ ದಿನಾಂಕ | : 22/09/2022 |
| 04. | ಉತ್ತರಿಸುವ ಸಚಿವರು. | : ಗೃಹ ಸಚಿವರು |

| ಕ್ರಸ | ಪ್ರಶ್ನೆ | ಉತ್ತರ |
|---|---|---|
| ಅ | ಸರ್ಕಾರಿ ಜಮೀನಿಗೆ ಸುಳ್ಳು ದಾಖಲೆ ಸೃಷ್ಟಿ ಮತ್ತು ಪೊಲೀಸರ ಹೆಸರಿನಲ್ಲಿ ಅಪರಾಧ ಹಿನ್ನಲೆಯುಳ್ಳ ವ್ಯಕ್ತಿ ಹಣ ವಸೂಲಿ ಮಾಡುತ್ತಿರುವ ಬಗ್ಗೆ ಸೂಕ್ತ ದಾಖಲೆಯನ್ನು ನೀಡಿ ದೂರು ನೀಡಿದ್ದಲ್ಲಿ ಐಪಿಸಿಯ ಯಾವ ಕಲಂ ಅಡಿಯಲ್ಲಿ ದೂರು ದಾಖಲಿಸ ಬೇಕೆನ್ನುವುದು ಸೂಕ್ತ ಕಲಂ ಅಡಿ ಕೇಸು ದಾಖಲಿಸದಿದ್ದಲ್ಲಿ ಅದಕ್ಕೆ ಜವಾಬ್ದಾರರು ಯಾರು; | ಸರ್ಕಾರಿ ಜಮೀನಿಗೆ ಸುಳ್ಳು ದಾಖಲೆ ಸೃಷ್ಟಿಸಿ ವಂಚನೆ ಮಾಡಿದವರ ವಿರುದ್ಧ ಕಲಂ 468-471-420 ಐಪಿಸಿ ಹಾಗೂ ಕಲಂ 192 (ಎ) ಲ್ಯಾಂಡ್ ರೆವಿನ್ಯೂ ಆಕ್ಟ್ 1964 ರ ಅಡಿಯಲ್ಲಿ ಕೇಸು ದಾಖಲಿಸ ಬಹುದಾಗಿದೆ. ಸೂಕ್ತ ಕಲಂ ಅಡಿಯಲ್ಲಿ ಕೇಸು ದಾಖಲಿಸದಿದ್ದಲ್ಲಿ ಸಂಬಂಧಪಟ್ಟ ತನಿಖಾಧಿಕಾರಿಗಳು/ ಠಾಣಾಧಿಕಾರಿಗಳು ಜವಾಬ್ದಾರರಾಗಿರುತ್ತಾರೆ. |
| ಆ | ಬೆಂಗಳೂರು ನಗರ ಜಿಲ್ಲೆಯ ಸೋಲದೇವನಹಳ್ಳಿ ಠಾಣೆಗೆ ದಿನಾಂಕ: 11-11-2020 ರಂದು ಸರ್ಕಾರಿ ಜಮೀನಿಗೆ ನಕಲಿ ದಾಖಲೆ ಸೃಷ್ಟಿ ಮತ್ತು ಪೊಲೀಸರ ಹೆಸರಿನಲ್ಲಿ ಹಣ ವಸೂಲಿ ಮಾಡುತ್ತಿರುವ ಬಗ್ಗೆ ಬಂದ ದೂರನ್ನು ಎನ್.ಸಿ.ಆರ್.ಮಾಡಿ (ಅರ್ಜಿ.ಸಂಖ್ಯೆ. 817/30/2020) ದೂರಿನಲ್ಲಿರುವ ಮಾಹಿತಿಯನ್ನು ಮಾರೆಮಾಚುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಳ್ಳುವ ಕ್ರಮವೇನು. | ದಿನಾಂಕ: 11-11-2020 ರಂದು ಸೋಮಶೆಟ್ಟಿಹಳ್ಳಿ ಗ್ರಾಮದ ವಾಸಿ ರಂಗಪ್ಪ ಬಿನ್ ಲೇಟ್ ಚಿಕ್ಕಣ್ಣರವರು ಸೋಮಶೆಟ್ಟಿಹಳ್ಳಿ ಗ್ರಾಮದ ವಾಸಿಗಳಾದ ನಾಗರಾಜು ಮತ್ತು ಅವರ ಹೆಂಡತಿ ಶ್ರೀಮತಿ. ರತ್ನಮ್ಮ ರವರ ವಿರುದ್ಧ ನೀಡಿರುವ ದೂರು ಅರ್ಜಿ ಸಂಖ್ಯೆ:817/30/2020 ರಲ್ಲಿ "ಸೋಮಶೆಟ್ಟಿಹಳ್ಳಿ ಗ್ರಾಮದ ಸರ್ವೆ ನಂ-25 ಸರ್ಕಾರಿ ಜಮೀನು ಹರಾಜಾಗಿದ್ದು, ಹರಾಜು ಆದ ಜಾಗ ಕೊಂಡ ವ್ಯಕ್ತಿಗೆ ಹಸ್ತಾಂತರವಾಗದೆ ಸರ್ಕಾರದ ವಶದಲ್ಲಿಯೇ ಇದ್ದು, ಸದರಿ ಜಾಗವನ್ನು ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿ ಮನೆ ನಿರ್ಮಾಣ ಮಾಡುವವರಿಗೆ ಮಾರಾಟ/ ಅಡಮಾನ ಮಾಡುವ ಉದ್ದೇಶದಿಂದ ಮೊಬೈಲ್‌ನಲ್ಲಿ ನಾಗರಾಜು ಸಂಭಾಷಣೆ ನಡೆಸಿರುವ ಆಡಿಯೋ ಗ್ರಾಮದಲ್ಲಿ ಹರಿದಾಡುತ್ತಿದ್ದು, ಸದರಿ ಆಡಿಯೋವನ್ನು ಪೆನ್‌ಡ್ರೈವ್‌ನಲ್ಲಿ ಸೇವ್ ಮಾಡಿ ತಮಗೆ ನೀಡಲಾಗಿದೆ. ತಾವು ಈ ಬಗ್ಗೆ ಉಲ್ಲೇಖದಲ್ಲಿರುವ ಸುತ್ತೋಲೆಯ ಪ್ರಕಾರ ಕ್ರಮ ಕೈಗೊಂಡು ಸರ್ಕಾರಿ ಜಾಗವನ್ನು ಉಳಿಸಬೇಕೆಂದು ವಿನಂತಿಸಿಕೊಳ್ಳುತ್ತೇವೆ", ಎಂದು ಅರ್ಜಿದಾರರು ತಮ್ಮ ಅರ್ಜಿಯಲ್ಲಿ ಆರೋಪಿಸಿರುತ್ತಾರೆ.<br><br>ಸೋಮಶೆಟ್ಟಿಹಳ್ಳಿ ಗ್ರಾಮದ ಸರ್ವೆ ನಂ-25 ರಲ್ಲಿನ ಸರ್ಕಾರಿ ಜಮೀನು ಈಗಾಗಲೇ ಹರಾಜು ಆಗಿರುವುದಾಗಿ, ಈ ಜಾಗವು ಹರಾಜಿನಲ್ಲಿ ಖರೀದಿಸಿರುವ ವ್ಯಕ್ತಿಗೆ ಹಸ್ತಾಂತರವಾಗದೇ ಸರ್ಕಾರದ ವಶದಲ್ಲಿಯೇ ಇರುವುದಾಗಿ ಅರ್ಜಿಯಲ್ಲಿ ತಿಳಿಸಿದ್ದು, ಈ ಜಾಗಕ್ಕೆ ಸಂಬಂದಪಟ್ಟಂತೆ ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿ ಮನೆ ನಿರ್ಮಾಣ ಮಾಡುತ್ತಿರುವ ಬಗ್ಗೆ ಅರ್ಜಿಯಲ್ಲಿ ನಮೂದಿಸಿದ್ದು, ಈ ಬಗ್ಗೆ ಯಾವುದೇ ಪೂರಕ ದಾಖಲಾತಿಗಳನ್ನು ಅರ್ಜಿದಾರರು ಒದಗಿಸಿರುವುದಿಲ್ಲ. ಈ ಜಾಗಕ್ಕೆ ಸಂಬಂಧಪಟ್ಟಂತೆ ಕಂದಾಯ |

| | | |
|---|---|---|
| | | ಇಲಾಖೆ ಅಧಿಕಾರಿಗಳಾಗಲಿ ಅಥವಾ ಹರಾಜಿನಲ್ಲಿ ಖರೀದಿಸಿರುವ ವ್ಯಕ್ತಿಗಳಾಗಲಿ ದೂರು ನೀಡಿರುವ ಬಗ್ಗೆ ದಾಖಲಾತಿಗಳನ್ನು ಈ ಅರ್ಜಿಯಲ್ಲಿ ಒದಗಿಸಿರುವುದಿಲ್ಲ. ಈ ಜಾಗವು ಸರ್ಕಾರಿ ಜಾಗವೆಂದು ಅರ್ಜಿಯಲ್ಲಿ ನಮೂದಿಸಿದ್ದು, ಸಂಬಂಧಿಸಿದ ಕಂದಾಯ ಇಲಾಖೆಯ ಅಧಿಕಾರಿಗಳು ಈ ಬಗ್ಗೆ ದೂರು ನೀಡಿರುವುದಿಲ್ಲ.<br><br>ಸೋಮಶೆಟ್ಟಿಹಳ್ಳಿ ಗ್ರಾಮದ ಸರ್ವೇ ನಂ–25ರ ಸರ್ಕಾರಿ ಜಾಗದಲ್ಲಿ ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿ ಮನೆ ನಿರ್ಮಾಣ ಮಾಡುತ್ತಿರುವವರೊಂದಿಗೆ ಶ್ರೀ ನಾಗರಾಜು ರವರು ಪೊಲೀಸರ ಹೆಸರಿನಲ್ಲಿ ಹಣ ವಸೂಲಿ ಮಾಡುತ್ತಿದ್ದಾರೆಂದು ಮೊಬೈಲ್‌ನಲ್ಲಿ ಮಾತನಾಡಿರುವ ಸಂಭಾಷಣೆಯಲ್ಲಿ ಗ್ರಾಮದಲ್ಲಿ ಹರಿದಾಡುತ್ತಿರುವುದಾಗಿ ಅರ್ಜಿಯಲ್ಲಿ ತಿಳಿಸಿದ್ದು, ಸಂಭಾಷಣೆಯಲ್ಲಿ ನಾಗರಾಜು ರವರೊಂದಿಗೆ ಮಾತನಾಡಿರುವ ವ್ಯಕ್ತಿಗಳು ಈ ಬಗ್ಗೆ ದೂರು ನೀಡಿರುವುದಿಲ್ಲ.<br><br>ದಿನಾಂಕ 11–11–2020 ರಂದು ಅರ್ಜಿದಾರರಾದ ಶ್ರೀ ರಂಗಪ್ಪ ಹಾಗೂ ಇತರರು ಎದುರು ಅರ್ಜಿದಾರರಾದ ನಾಗರಾಜು ಮತ್ತು ಅವರ ಪತ್ನಿ ಶ್ರೀಮತಿ ರತ್ನಮ್ಮ ರವರ ವಿರುದ್ಧ ಸೋಲದೇವನಹಳ್ಳಿ ಪೊಲೀಸ್ ಠಾಣೆಗೆ ಸಲ್ಲಿಸಿರುವ ದೂರು ಅರ್ಜಿಯಲ್ಲಿ ಆರೋಪಿಸಿರುವ ಇತರೆ ಅಂಶಗಳು ಅಸಂಜ್ಞೇಯ ಪ್ರಕರಣಕ್ಕೆ ಸಂಬಂಧಪಟ್ಟಿದ್ದರಿಂದ ಇವರ ದೂರು ಅರ್ಜಿಯನ್ನು ಠಾಣಾ ಎನ್.ಸಿ.ಆರ್ ನಂ–814/2020(ಅರ್ಜಿ ಸಂಖ್ಯೆ 817/30/2020) ರಲ್ಲಿ ದಾಖಲಿಸಲಾಗಿರುತ್ತದೆ. |
| ಇ | ಸರ್ಕಾರಿ ಜಾಗಕ್ಕೆ ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡುವವರ ಮೇಲೆ ಸರ್ಕಾರ ಕೈಗೊಳ್ಳುವ ಕ್ರಮವೇನು; ಇಂತಹ ಅಕ್ರಮಗಳಿಗೆ ಸಹಕರಿಸುವ ಅಧಿಕಾರಿಗಳ ಮೇಲೆ ಸರ್ಕಾರ ಕೈಗೊಳ್ಳುವ ಕ್ರಮವೇನು? | ಸರ್ಕಾರಿ ಜಾಗಕ್ಕೆ ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡುವವರ ವಿರುದ್ಧ ಯಾವುದೇ ದೂರುಗಳು ಬಂದಲ್ಲಿ ತನಿಖೆ ನಡೆಸಿ ಕಾನೂನಿನ ರೀತ್ಯಾ ಕ್ರಮ ಕೈಗೊಳ್ಳಲಾಗುತ್ತಿದೆ. ಈಗಾಗಲೇ ಯಾವುದೇ ಜಮೀನಿಗೆ ಸಂಬಂಧಿಸಿದ ಸಿವಿಲ್ ವ್ಯಾಜ್ಯಗಳಲ್ಲಿ ಹಾಗೂ ಇಂತಹ ಅಕ್ರಮಗಳಲ್ಲಿ ಸಹಕರಿಸದಂತೆ ಸುತ್ತೋಲೆ ಹೊರಡಿಸಲಾಗಿದ್ದು, ಇಂತಹ ಅಧಿಕಾರಿಗಳ ವಿರುದ್ಧ ಇಲಾಖಾ ವಿಚಾರಣೆಯನ್ನು ನಡೆಸಿ ಆರೋಪ ಸಾಬೀತಾದಲ್ಲಿ ಕಠಿಣ ಶಿಸ್ತು ಕ್ರಮವನ್ನು ಜರುಗಿಸಲಾಗುತ್ತಿದೆ. |

**HD 63 PCQ 2022**

(ಆರಗ ಜ್ಞಾನೇಂದ್ರ)
ಗೃಹ ಸಚಿವರು.